**OS: 34/2015**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ</u>**

ದಿನಾಂಕಃ 13.02.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರಿಂದ</u>**

ನಾನು ಈ ದಾವೆಯನ್ನು ಕೆ.ಎಫ್.ಎಫ್.ಸಿ ಯವರ ಮೇಲೆ ಸಲ್ಲಿಸಿರುತ್ತೇನೆ. ಕೆ.ಎಫ್.ಎಫ್.ಸಿ ಯವರು ನಮಗೆ ಸೇರಿದ ಎಂ.ಎಂ ಆಯಿಲ್ ಮಿಲ್ ನ್ನು ಮಾರಾಟ ಮಾಡಿರುವುದರಿಂದ ಅದು ನಮಗೆ ಸೇರಬೇಕೆಂದು ಈ ದಾವೆ ಸಲ್ಲಿಸಿರುತ್ತೇವೆ. ಸರ್ವೆ ನಂಃ 512, ವಿಸ್ತೀರ್ಣ 1.15 ಎಕರೆ ಆಸ್ತಿ ನಮಗೆ ಬರಬೇಕೆಂದು ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯು ಮೂಲತಃ ನನ್ನ ಮಾವ ಮಾಬುಸಾಬ್ ರವರಿಗೆ ಸೇರಿದ ಆಸ್ತಿ ಆಗಿದೆ. 1990 ರಲ್ಲಿ ಸದರಿಯವರು ಮೃತಪಟ್ಟಿರುತ್ತಾರೆ. ಮುಸ್ತಫ, ಕಬಲ ಹುಸೇನ್ ಮತ್ತು ಮೆಹಬೂಬ್ ರವರು ಎಂ.ಎಂ ಆಯಿಲ್ ಮಿಲ್ ನ ಪಾಲುದಾರರು ಆಗಿರುತ್ತಾರೆ. ಅಂದಾಜು 20 ವರ್ಷಗಳ ಹಿಂದೆ ಸದರಿ ಮಿಲ್ ನ್ನು ಸದರಿಯವರು ಪಾಲುದಾರರಾಗಿ ಪ್ರಾರಂಭಿಸಿರುತ್ತಾರೆ ನನಗೆ ನಿಖರವಾಗಿ ಗೊತ್ತಿಲ್ಲ. ಸದರಿಯವರು ಸದರಿ ಮಿಲ್ ನ ಹೆಸರಿನಲ್ಲಿ 1 ನೇ ಪ್ರತಿವಾದಿಯ ಸಂಸ್ಥೆಯಿಂದ ಸಾಲ ಪಡೆದಿದ್ದರು ಎಂದರೆ ಸರಿ. ಸದರಿ ಮಿಲ್ ನ್ನು ಅಡಮಾನ ಮಾಡಿ 1 ನೇ ಪ್ರತಿವಾದಿಯಿಂದ ಸದರಿ ಮೂವರು ಸಾಲ ಪಡೆದಿದ್ದರು. 20 ವರ್ಷಗಳ ಹಿಂದೆ ಸಾಲ ಪಡೆದಿದ್ದರು. ಎಷ್ಟು ಸಾಲ ಪಡೆದಿದ್ದರು ಎಂಬುದು ನನಗೆ ನೆನಪಿಲ್ಲ. ಸದರಿ ಸಾಲವನ್ನು ಸದರಿಯವರು ಪಾವತಿ ಮಾಡಿಲ್ಲ ಎಂದು ಸದರಿಯವರಿಗೆ 1 ನೇ ಪ್ರತಿವಾದಿ ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ಸದರಿ ಸಾಲವನ್ನು ಕಟ್ಟದೆ ಇದ್ದುದ್ದರಿಂದ 1 ನೇ ಪ್ರತಿವಾದಿಯ ಸಂಸ್ಥೆಯವರು ಸದರಿ ಆಸ್ತಿಯನ್ನು ಜಪ್ತುಪಡಿಸಿಕೊಂಡು ಸ್ವಾಧೀನವನ್ನು ದಿಃ 24.11.1994 ರಂದು ತೆಗೆದುಕೊಂಡು ಆ ನಂತರ ಮಾರಾಟದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿ ಆ ನಂತರ ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡಿದ್ದು, ಸದರಿ ಸರ್ಕಾರಿ ಹರಾಜಿನಲ್ಲಿ 2 ನೇ ಪ್ರತಿವಾದಿ ರೂ. 8,35,000/- ಗಳನ್ನು ಪಾವತಿ ಮಾಡಿ ಸದರಿ ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ 1 ನೇ ಪ್ರತಿವಾದಿಯ ಸಂಸ್ಥೆಯವರು 2 ನೇ ಪ್ರತಿವಾದಿಯ ಹೆಸರಿಗೆ ರಿಜಿಸ್ಟರ್ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮೋಸದಿಂದ ಬರೆದುಕೊಟ್ಟಿದ್ದಾರೆ. ಸದರಿ ಆಸ್ತಿಯಲ್ಲಿ 500X100 ಚದರ ಅಡಿ ಅಳತೆಯಲ್ಲಿ ಕಟ್ಟಡ ಸಹ ಒಳಗೊಂಡಿದೆ ಎಂದರೆ ಸರಿಯಲ್ಲ. ಸದರಿ ಕಟ್ಟಡವು ಸರ್ವೆ ನಂಃ 512 ರಿಂದ 514 ರಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂಃ 512 ರಲ್ಲಿ ಇತ್ತು.

ದಿಃ 24.02.2002 ರಲ್ಲಿ ಚಮನ್ ಷಾ ವಲಿ ಆಯಿಲ್ ಮಿಲ್ ನ್ನು ಕರಡಿ ಕೊಟ್ರಯ್ಯರವರಿಗೆ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು 1ನೇ ಪ್ರತಿವಾದಿ ಸಂಸ್ಥೆಯಿಂದ ಮಾಡಿದ ಸಾಲವನ್ನು ರೂ. 9 ಲಕ್ಷಕ್ಕಿಂತ ಹೆಚ್ಚು ಹಣವನ್ನು ನೀಡಿ ಓ.ಟಿ.ಎಸ್ ಮೂಲಕ ತಿರುವಳಿ ಮಾಡಿರುತ್ತೇವೆ. ಕರಡಿ ಕೊಟ್ರಯ್ಯ ಮತ್ತು ನನ್ನ ಗಂಡ ಮಹಬೂಬ್ ಸಾಬ್ ರವರು ಸದರಿ ಹಣ ಕಟ್ಟಿರುತ್ತಾರೆ. ಸದರಿ ಸಾಲ ಮರುಪಾವತಿಸಿದ ಬಗ್ಗೆ 1ನೇ ಪ್ರತಿವಾದಿ ಸಂಸ್ಥೆಯವರು ನಮ್ಮ ಬ್ಯಾಂಕಿನಲ್ಲಿ ಯಾವುದೇ ಸಾಲದ ಬಾಕಿ ಇಲ್ಲ ಎಂದು ತಿರುವಳಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ತಿರುವಳಿ ಪತ್ರದ ಆಧಾರದ ಮೇಲೆ ಅಡಮಾನ ತಿರುವಳಿ ಆಗಿದೆ. ಅಡಮಾನ ತಿರುವಳಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1ನೇ ಪ್ರತಿವಾದಿ ಸಂಸ್ಥೆಗೆ ನನ್ನ ಗಂಡ ಯಾವುದೇ ಹಣ ಕಟ್ಟಿಲ್ಲ, 1ನೇ ಪ್ರತಿವಾದಿ ಸಂಸ್ಥೆಯವರು ಯಾವುದೇ ತಿರುವಳಿ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಿ.ಪಿ 12 ರಂತೆ ನೊಂದಾಯಿತ ಕ್ರಯಪತ್ರವನ್ನು 1ನೇ ಪ್ರತಿವಾದಿ 2ನೇ ಪ್ರತಿವಾದಿ ಹೆಸರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 2010 ರಲ್ಲಿ 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ನಿ.ಪಿ 12 ರ ದಾಖಲೆಯನ್ನು ಬರೆದುಕೊಟ್ಟ ಬಗ್ಗೆ ನಮ್ಮ ತಿಳುವಳಿಕೆಗೆ ಬಂದಿರುತ್ತದೆ. ಆ ಆಸ್ತಿಯ ಸ್ವಾಧೀನ ನಮಗೆ ಬಿಟ್ಟುಕೊಡಬೇಕೆಂದು 2ನೇ ಪ್ರತಿವಾದಿಯ ಬಳಿ ಕೇಳಲು ಹೋಗಿದ್ದರು ದೀಪಾವಳಿ ಇದೆ ಮುಗಿದ ನಂತರ ಬಿಟ್ಟುಕೊಡವುದಾಗಿ ಹೇಳಿದ್ದರು, ಆ ಕಾಲಕ್ಕೆ 2ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದರು. ಪ್ರತಿವಾದಿ ನಂಃ 1, 2 ನೇಯವರು ನಮ್ಮ ಆಸ್ತಿಯನ್ನು ಮೋಸದಿಂದ ಹೊಡೆದುಕೊಂಡಿದ್ದಾರೆ ಎಂದು ಯಾವುದೇ ಕ್ರಿಮಿನಲ್ ಪ್ರಕರಣವನ್ನು ಸದರಿಯವರ ವಿರುದ್ಧ ದಾಖಲಿಸಿರುವುದಿಲ್ಲ.

ಓ.ಎಸ್ ನಂಃ 21/2011 ರಲ್ಲಿ ಆಸ್ತಿ ನನ್ನದು ಮತ್ತು ತಕರಾರು ಮಾಡಬಾರದು ಮತ್ತು ಭಾಗಾಂಶ ಕೊಡಬೇಕೆಂದು 2ನೇ ಪ್ರತಿವಾದಿಯ ವಿರುದ್ಧ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು ನಮಗೆ ಸೇರಿದ್ದು ನಮಗೆ ಬಿಟ್ಟುಕೊಡಿ ಎಂದು ಕೇಳಿರುತ್ತೇವೆ. ಆ ದಾವೆಯಲ್ಲಿ ಈ ದಾವೆಯ 1ನೇ ಪ್ರತಿವಾದಿ ಅವಶ್ಯಕ ಪಕ್ಷಗಾರರು ಎಂದು ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. 1ನೇ ಪ್ರತಿವಾದಿಯು ನಾವು ಸಲ್ಲಿಸಿದ ಅರ್ಜಿಗೆ ತಕರಾರು ಸಲ್ಲಿಸಿದ್ದು ಈಗಾಗಲೆ ಮಾರಾಟ ಮಾಡಿರುವುದಾಗಿ ಹೇಳಿದ್ದರಿಂದ ಸದರಿ ಅರ್ಜಿ ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ದಾವೆಯು ನಮ್ಮಂತೆಯೇ ಡಿಕ್ರಿ ಆಗಿದೆ. ಸದರಿ ಡಿಕ್ರಿ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಪ್ರಕರಣದಲ್ಲಿ 1ನೇ ಪ್ರತಿವಾದಿ ವಿರುದ್ಧ ಡಿಕ್ರಿ ಆಗದೆ ಇದ್ದರು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಾವ ಮಾಬುಸಾಬ್ ರವರು ಮೃತಪಟ್ಟ ನಂತರ ಅವರ ಹೆಂಡತಿ ಪಿ. ಪೀರಮ್ಮರವರ ಹೆಸರಿಗೆ ಪೌತಿ ಖಾತೆ ಆಗಿದೆ ಎಂದರೆ ಸರಿ. ನನ್ನ ಮಾವ ಮೃತಪಟ್ಟನಂತರ 4-5 ವರ್ಷಗಳ ನಂತರ ನನ್ನ ಅತ್ತೆ ಹೆಸರಿಗೆ ಪೌತಿ ವಾರಸುದಾರಿಕೆ ಮೇರೆಗೆ ಬಂದಿದೆ. ಈ ಸಂಬಂಧವಾಗಿ ದಾಖಲೆ ಹಾಜರುಪಡಿಸಿರುತ್ತೇನೆ. ಯಾವುದೇ ದಾಖಲೆ ಹಾಜರುಪಡಿಸಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೀರಮ್ಮ ರವರು ಹೆಸರಿನಲ್ಲಿ ಯಾವುದೇ ಹಕ್ಕು ಮತ್ತು ಮಾಲೀಕತ್ವ ಇರಲಿಲ್ಲ ಎಂದರೆ ಸರಿಯಲ್ಲ. ಪೀರಮ್ಮರವರು ದಿಃ 05-02-2009 ರಂದು ನನ್ನ ಮತ್ತು ನನ್ನ ತಂಗಿಯವರ ಹೆಸರಿಗೆ ದಾನಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ. ಸದರಿ ದಾನಪತ್ರದ ಆಧಾರದ ಮೇಲೆ ನಾವು ಮಾಲೀಕರು ಆಗಿರುತ್ತೇವೆ. ಅದರ ಆಧಾರದ ಮೇಲೆ ನಮ್ಮ ಹೆಸರಿಗೆ ಹಕ್ಕು ಬದಲಾವಣೆ ಆಗಿರುತ್ತದೆ. ನಮ್ಮ ಅತ್ತೆಯಾಗಲೀ, ನಾವಾಗಲೀ ಸದರಿ ದಾವಾ ಆಸ್ತಿಯ ಮಾಲೀಕರು ಅಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ನಮ್ಮ ಹೆಸರಿಗೆ ಯಾವುದೇ ದಾನಪತ್ರವನ್ನು ಬರೆದುಕೊಡಲು ಹಕ್ಕು ಇಲ್ಲ ಹಾಗಾಗಿ ನಮಗೂ ಸಹ ದಾವಾ ಆಸ್ತಿಯ ಮೇಲೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಈಗ 2 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇದ್ದಾರೆ. ಹೀಗ್ಗೆ 13-14 ವರ್ಷಗಳಿಂದ 2 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇದ್ದಾರೆ. 2 ನೇ ಪ್ರತಿವಾದಿಗೆ ದಾವಾ ಆಸ್ತಿಯ ಸ್ವಾಧೀನಬಿಟ್ಟುಕೊಡಿ ಎಂದು ನೋಟೀಸ್ ನೀಡಿರುವುದಿಲ್ಲ. ಸದರಿ 13 ವರ್ಷ ಕಳೆದ ನಂತರ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 13 ವರ್ಷದ ಒಳಗೆ ಸಲ್ಲಿಸಿರುತ್ತೇನೆ. ನಾವು ಈ ದಾವೆ ಸಲ್ಲಿಸಲು ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ 2002 ರಲ್ಲಿ ಮಾರಾಟ ಮಾಡಿರುವುದರಿಂದ ಈಗ ಅದನ್ನು ಪ್ರಶ್ನೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ ದಾವಾ ಸಲ್ಲಿಸುವ ಕಾಲಕ್ಕೆ ಹೆಚ್ಚಾಗಿದ್ದರಿಂದ ದಾವಾ ಆಸ್ತಿಯನ್ನು ಹೊಡೆಯಬೇಕೆಂಬ ಕಾರಣಕ್ಕೆ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

(ಪ್ರತಿವಾದಿ ನಂಃ 2 ರ ವಾರಸುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**